ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ-೧೬೦	ಬೆಂಗಳೂರು, ಗುರುವಾರ, ೨೫ ಸೆಪ್ಟೆಂಬರ್, ೨೦೨೫ (ಆಶ್ವಯುಜ ೦೩, ಶಕವರ್ಷ ೧೯೪೭)	ಸಂಚಿಕೆ-೧೮೭
Volume-160	BENGALURU, THURSDAY, 25 SEPTEMBER, 2025 (AASHWAYUJA 03, SHAKAVARSHA 1947)	Issue –187

ಭಾಗ ೬

ಬೆಂಗಳೂರು ವಿಭಾಗಕ್ಕೆ ಮತ್ತು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಸ್ಥಳೀಯವಾಗಿ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು

ಕರ್ನಾಟಕ ಸರ್ಕಾರ
ಕಂದಾಯಇಲಾಖೆ

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತಪರಿಹಾರದ ಹಕ್ಕು, ಪುನರ್ವಸತಿ ಹಾಗೂ ಪುನರ್ನಿರ್ಮಾಣಕಾಯ್ದೆ – 2013ರ, ಕಲಂ – 19(1) ಹಾಗೂ 19(2) ಮೇರೆಗೆ ಘೋಷಣೆ

ಸಂ : ಕಂಇ 86 **ಎಕ್ಯೂಹೆಚ್** 2024 **ದಿನಾಂಕ :**24-09-2025

ಈ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟ ಪಡಿಸಿರುವ ಜಮೀನುಗಳು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ಎತ್ತಿನಹೊಳೆ ಯೋಜನೆಗಾಗಿ ಯೋಜನೆಗೆ ಅವಶ್ಯವಿರುವ ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಹಳೇಬೀಡು ಹೋಬಳಿ ವಡ್ಡರಹಳ್ಳಿ ಗ್ರಾಮದ ಜಮೀನಿನ ಭೂಸ್ವಾಧೀನತೆ ಅಗತ್ಯವಾಗಿದೆ ಎಂದು, ಈ ಯೋಜನೆಗೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು,ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013 (ಕೇಂದ್ರ ಅಧಿನಿಯಮ ಸಂಖ್ಯೆ:30) ಕ್ಕೆ ಅನುಗುಣವಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ದಿನಾಂಕ 23-07-2019 ರಿಂದ ಜಾರಿಗೆ ಬಂದಿರುವ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು,ಪುನರ್ ವಸತಿ ಮತ್ತು ಪುನರ್ ನಿರ್ಮಾಣ (ಕರ್ನಾಟಕ ತಿದ್ದುಪಡಿ) ಕಾಯ್ದೆ-2019 (ಕರ್ನಾಟಕ ಅಧಿನಿಯಮ ಸಂಖ್ಯೆ:16) ರ ಕಲಂ-10(ಎ) ರಡಿ ಮೂಲ ಕಾಯ್ದೆಯ ಅಧ್ಯಾಯ-II ಮತ್ತು III ರಲ್ಲಿನ ಉಪಬಂಧಗಳನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಿ ಸಂಖ್ಯೆ ಕಂಇ 86 AQH 2024, ದಿನಾಂಕ :07-12-2024 ರಂದು ಸರ್ಕಾರ ಅಧಿಸೂಚನೆಯನ್ನು

ಹೊರಡಿಸಲಾಗಿರುತ್ತದೆ. ಸದರಿ ಅಧಿಸೂಚನೆಯ ಮೇರೆಗೆ ಕಲಂ-11(1) ರಡಿಯಲ್ಲಿ ಕ್ರಮಾಂಕ: ಭೂ.ಸ್ವಾ:63/2024-25, ದಿನಾಂಕ:24-12-2024ನ್ನು ದಿನಾಂಕ:02-01-2025 ರಂದು ಅಧಿಸೂಚಿಸಿ ರಾಜ್ಯ ಪತ್ರದಲ್ಲಿ ಪ್ರಕಟಿಸಿದಂತೆ, ಭೂಸ್ವಾಧೀನತೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಪುನರ್ವಸತಿ ಹಾಗೂ ಪುನರ್ ನಿರ್ಮಾಣ ಕಾಯ್ದೆ-2013 ರ ಕಲಂ-15(2) ರನ್ವಯ ಆಕ್ಷೇಪಣೆಗಳು ಸ್ವೀಕೃತವಾಗಿಲ್ಲವಾದ್ದರಿಂದ ಭೂಸ್ವಾದೀನ ಕಾಯ್ದೆ ಕಲಂ-15(3) ರ ಅನುಸಾರ ಸದರಿ ಪ್ರಕರಣದಲ್ಲಿ ಮುಂದುವರೆಯಲು ಸರ್ಕಾರದ ಪತ್ರ ಸಂ: : ಕಂಇ 86 AQH 2024 ದಿನಾಂಕ: 16-04-2025 ರಡಿ ನಿರ್ದೇಶನ ನೀಡಲಾಗಿದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು,ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013 ರ ಕಲಂ-2013 ರ ಕಲಂ 19(1) ರಡಿ ಕೆಳಗೆ ಸೂಚಿಸಿರುವ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುವುದು ಅಗತ್ಯವೆಂದು ಕರ್ನಾಟಕ ಸರ್ಕಾರಕ್ಕೆ ಮನದಟ್ಟಾಗಿರುವುದರಿಂದ ಮೇಲೆ ತಿಳಿಸಿರುವ ಉದ್ದೇಶಕ್ಕೆ ಜಮೀನುಗಳು ಅಗತ್ಯವಾಗಿವೆಯಂದು ಸದರಿ ಅಧಿನಿಯಮದ 19(1) ನೇ ಪ್ರಕರಣದ ಮೇರೆಗೆ ಈ ಮೂಲಕ ಘೋಷಿಸಲಾಗಿದೆ.

ಅದರಂತೆ ಸದರಿ ಭೂಸ್ವಾಧೀನ ಅಧಿನಿಯಮ 3ನೇ ಪ್ರಕರಣದ (ಜಿ) ಖಂಡದ ಮೇರೆಗೆ ವಿಶೇಷ ಭೂಸ್ವಾಧೀನಾಧಿಕಾರಿ, ಎತ್ತಿನಹೊಳೆ ಯೋಜನೆ, ಹಾಸನ ಇವರನ್ನು ಸದರಿ ಜಮೀನುಗಳ ಸ್ವಾಧೀನತೆಯ ಮುಂದಿನ ಎಲ್ಲಾ ಕಾನೂನು ಕ್ರಮ ಮತ್ತು ಪ್ರಕ್ರಿಯೇಗಳ ಕುರಿತಂತೆ ಜಿಲ್ಲಾಧಿಕಾರಿಯವರ ಪ್ರಕಾರ್ಯಾವನ್ನು ನಿರ್ವಹಿಸುವ ಸಲುವಾಗಿ ಈ ಮೂಲಕ ನೇಮಕ ಮಾಡಲಾಗಿದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂ ಇ 86 AQH 2024 ದಿನಾಂಕ 07-12-2024 ರನ್ವಯ ಸದರಿ ಯೋಜನೆಗೆ 2013 ರ ಮೂಲ ಕಾಯ್ದೆಯ ಅಧ್ಯಾಯ-II & III ರಲ್ಲಿನ ಉಪಬಂಧಗಳನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಲಾಗಿರುವುದರಿಂದ ಸದರಿ ಕಾಯ್ದೆಯ ಅಧ್ಯಾಯ II & III ರಲ್ಲಿನ ಪುನರ್ವಸತಿ ಮತ್ತು ಪುನರ್ ನಿರ್ಮಾಣದ ಅವಕಾಶಗಳ ಬದಲಾಗಿ ನೀಡಲಾಗುವ ಒಂದು ಇಂಡಿಗಂಟು ಮೊತ್ತವನ್ನು 'ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ,ಸೂಕ್ತ ಪರಿಹಾರದ ಹಕ್ಕು ಪುನರ್ವಸತಿ ಮತ್ತು ಪುನರ್ ನಿರ್ಮಾಣ(ಕರ್ನಾಟಕ ತಿದ್ದುಪಡಿ) ನಿಯಮಗಳು-2020 ರ ನಿಯಮ 29(5) ರಂತೆ ನಿಗಧಿಪಡಿಸಲು ತೀರ್ಮಾನಿಸಲಾಗಿದೆ.

ಈ ಮೇಲಿನ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಸದರಿ ಅಧಿನಿಯಮದ ಕಲಂ-21(1) ರಡಿ ಸಂಬಂಧಿಸಿದ ಹಿತ್ತಾಸಕ್ತಿದಾರರಿಗೆ ಭೂಸ್ವಾಧೀನತೆಯ ಜಮೀನುಗಳ ಕಬ್ಜಾ ಪಡೆಯುವ ಉದ್ದೇಶದ ಬಗ್ಗೆ ಹಾಗೂ ಪರಿಹಾರದ ಕ್ಲೇಮುಗಳನ್ನು ಸಲ್ಲಿಸಲು ತಿಳುವಳಿಕೆ ನೋಟೀಸ್ ನೀಡಿ ಮುಂದಿನ ಕ್ರಮ ಜರುಗಿಸಲು ನಿರ್ದೇಶಿಸಿದೆ.

ಸದರಿ ಪ್ರಕರಣದಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಜಮೀನಿನ ಒಂದು ನಕ್ಷೆಯನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳು, ಎತ್ತಿನಹೊಳೆ ಯೋಜನೆ, ಹಾಸನ ಇವರ ಕಾರ್ಯಾಲಯದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ

ಅನುಸೂಚಿ

ಜಿಲ್ಲೆ: ಹಾಸನ ತಾಲ್ಲೂಕು: ಬೇಲೂರು ಹೋಬಳಿ: ಹಳೇಬೀಡು ಗ್ರಾಮ: ವಡ್ಡರಹಳ್ಳಿ

ಕ್ರ. ಸಂ	ಖಾತೆದಾರರ/ ಹೆಸರು (ಜೆ.ಎಂ.ಸಿ ಯನ್ವಯ)		ಸರ್ವೆ/ ಖಾತಾ ನಂಬರ್			ಸ್ವಾಧೀನಕ್ಕೊಳಪಡುವ ಒಟ್ಟು ವಿಸ್ತೀರ್ಣ(ಕಲಂ-11 (1) ರನ್ವಯ)		ತರಹೆ	ಸ್ವಾಧೀನಕ್ಕೊಳಪಡುವ ಒಟ್ಟು ವಿಸ್ತೀರ್ಣ		ತರಹೆ	ಚೆಕ್ಕಬಂದಿ/ಸರಹದ್ದು				ಮರ/ಮಾಲ್ಕಿಗಳ ವಿವರ				ಪರಾ
	ಭೂಮಾಲೀಕರ/ ಹಿಡುವಳಿದಾರರ ಹೆಸರು	ಅನುಭವದಾರರ ಹೆಸರು		ಹಿಸ್ಸಾ ನಂಬರ್	ಒಟ್ಟು ವಿಸ್ತೀರ್ಣ	ಕೃಷಿ/ಕೃಷಿಯೇತರ ಖರಾಬು	ಖರಾಬು		ಕೃಷಿ/ಕೃಷಿಯೇತರ ಖರಾಬು	ಖರಾಬು		ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	ಮರಗಳ ವಿಧ	ಮರಗಳ ಸಂಖ್ಯೆ	ಮಾಲ್ಕಿ/ಕಟ್ಟಡಗಳ ವಿವರ	ಮಾಲ್ಕಿ/ಕಟ್ಟಡಗಳ ಸಂಖ್ಯೆ/ವಿಸ್ತೀರ್ಣ	
1	2	3	4	5	6	7	8	9	10	11	12	13	14	15	16	17	18	19	20	21
1	1) ಜಯಮ್ಮ ಕೋಂ ಸಿದ್ದರಾಜು 2) ವಿಜನಿನಿ ಭೂಸ್ವಾದೀನ	1)ಜಯಮ್ಮ ಕೋಂ ಸಿದ್ದರಾಜು 2) ವಿಜನಿನಿ ಭೂಸ್ವಾದೀನ	27	3	1-39	0-10	-	ಖುಷ್ಕಿ	0-10	-	ಖುಷ್ಕಿ	ಗ್ರಾಮ ಶಿವಪುರ ಕಾವಲು ಗಡಿ	ಸರ್ವೆ ನಂ 27/3 ರ ಉಳಿಕೆ	ಸರ್ವೆ ನಂ 27/3 ರ ಉಳಿಕೆ	ಲಾ.ಹಿ 4					

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

2	1)ಸಿದ್ದರಾಜು ಬಿನ್ ನಂಜಪ್ಪ 2)ವಿಜನಿನಿ ಭೂಸ್ವಾಧೀನ 3)ಕಾವೇರಿ ನೀರಾವರಿ ನಿಗಮ ನಿಯಮಿತ 4)ಇರಿಗೇಶನ್ ಹಳೇ ಬೀಡು-ಮಾದೀಹಳ್ಳಿ ಲೆವೆಲ್	1)ಸಿದ್ದರಾಜು ಬಿನ್ ನಂಜಪ್ಪ 2)ವಿಜನಿನಿ ಭೂಸ್ವಾಧೀನ 3)ಕಾವೇರಿ ನೀರಾವರಿ ನಿಗಮ ನಿಯಮಿತ 4)ಇರಿಗೇಶನ್ ಹಳೇ ಬೀಡು-ಮಾದೀಹಳ್ಳಿ ಲೆವೆಲ್	27	4	1-25	0-29	-	ಖುಷ್ಕಿ	0-23	0-01	ಖುಷ್ಕಿ	ಗ್ರಾಮ ಶಿವಪುರ ಕಾವಲು ಗಡಿ	ಸರ್ವೆ ನಂ 27/4 ರ ಉಳಿಕೆ	ಸರ್ವೆ ನಂ 27/4 ರ ಉಳಿಕೆ	ಸರ್ವೆ ನಂ 27/4 ರ ಉಳಿಕೆ					
	ಒಟ್ಟು					**0-39**			**0-33**	**0-01**									

ಘೋಶ್ವಾರೆ

ಕ್ರ.ಸಂ	ಗ್ರಾಮದ ಹೆಸರು	ಖುಷ್ಕಿ/ ಎ.ಗುಂ	ಸರ್ಕಾರಿ ಖರಾಬು	ಕಾಫಿ/ ಪ್ಲಾಂಟೇಷನ್	ತರಿ ಎ.ಗುಂ	ಗ್ರಾಮ ಠಾಣಾ	ಒಟ್ಟು
1.	ವಡ್ಡರಹಳ್ಳಿ	0-33	0-01	-	-	-	0-34

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರೇಣುಕ ಬಿ.)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಸ್ವಾಧೀನ-1&3)

PR-1163

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH